ಸಿಸಿ 222/2016 ಪಿ.ಡಬ್ಲ್ಯೂ 1

<u>ದಿನಾಂಕ 19.10.2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ . HPSK ವಕೀಲರಿಂದಃ</u>**

ನಾನು ಪಿ.ಯು.ಸಿ. ವರೆಗೆ ವಿಧ್ಯಾಭ್ಯಾಸ ಮಾಡಿದ್ದೇನೆ. ನಾನು ವ್ಯವಸಾಯ ಮತ್ತು ಕಂಟ್ರಕ್ಟರ್ ಕೆಲಸ ಮಾಡುತ್ತೇನೆ. ಆ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿಲ್ಲ . ದಾಖಲೆಗಳನ್ನು ಹಾಜರು ಮಾಡಲು ತೊಂದರೆ ಇಲ್ಲ. ಆರೋಪಿ ಮೈಸೂರಿನಲ್ಲಿ ಟ್ರಾವೆಲ್ಸ ಕೆಲಸ ಮಾಡುತ್ತಿದ್ದು , ನಾನು ಮಂಡ್ಯದಲ್ಲಿ ವಾಸವಾಗಿದ್ದು ಹೋಗುತ್ತಾ ಬರುತ್ತಾ ಪರಿಚಯವಾಗಿದ್ದಾರೆ. ಆರೋಪಿ ಬಗ್ಗೆ ಸಾಮಾನ್ಯವಾಗಿ ಎಲ್ಲಾ ವಿಚಾರ ಗೊತ್ತು . ಆರೋಪಿ ಟ್ರಾವೆಲ್ಸ್ ನಡೆಸುತ್ತಿದ್ದು 3-4 ಕಾರುಗಳು ಮತ್ತು ಬಸ್ಸು ಇದ್ದು ಅದರ ಅಭಿವೃದ್ದಿಗಾಗಿ ಹಣ ಪಡೆದಿರುತ್ತಾರೆ. ಸದರಿ ಟ್ರಾವಲ್ಸ ಅನ್ನು ಮೈಸೂರಿನ ಆರ್ . ಗೇಟ್ ಸರ್ಕಲ್ ಬಳಿ ನಡೆಸುತ್ತಿದ್ದಾರೆ . ಸದರಿ ಟ್ರಾವೆಲ್ ಏಜೆನ್ಸಿ ಹೆಸರು ಗೊತ್ತಿಲ್ಲ. ಸದರಿ ಏಜೆನ್ಸಿಯನ್ನು 6 ವರ್ಷಗಳ ಹಿಂದೆ ನೋಡಿದ್ದು ಸದರಿ ಬಿಲ್ಡಂಗ್ ನ ಮಾಲೀಕರು ಯಾರು ಎಂದು ಗೊತ್ತಿಲ್ಲ. ಆರ್ ಗೇಟ್ ರಸ್ತೆಯ ದಕ್ಷಿಣಕ್ಕೆ ಮೈಸೂರಿನ ಅರಮನೆ ಮೈದಾನ , ವಸ್ತು ಪ್ರದರ್ಶನ ಮತ್ತು ನಂಜನಗೂಡ ರಸ್ತೆ ಬರುತ್ತದೆ ಎಂದರೆ ಹೌದು. ಪಶ್ಚಿಮಕ್ಕೆ ಆದಂತೆ ಸಿಟಿ ಬಸ್ ಸ್ಟಾಂಡ್ ಮತ್ತು ರಸ್ತೆ ಇದ್ದು ಯಾವುದೇ ಬಿಲ್ಡಂಗ್ ಇಲ್ಲ ಎಂದರೆ ಹೌದು. ಉತ್ತರಕ್ಕೆ ಆದಂತೆ ಮೈಸೂರಿನ ಕೆ.ಆರ್.ಟಿ.ಸಿ ಬಸ್ ನಿಲ್ದಾಣ ಇದ್ದು ಯಾವುದೇ ಬಿಲ್ಡಂಗ್ ಇಲ್ಲ . ಪೂರ್ವಕ್ಕೆ ಆದಂತೆ ಬನ್ನೂರು ಮತ್ತ ಚಾಮುಂಡಿ ಬೆಟ್ಟಕ್ಕೆ ಹೋಗುವ ರಸ್ತೆ ಬಿಟ್ಟು ಯಾವುದೇ ಬಿಲ್ಡಂಗ್ ಇಲ್ಲ ಎಂದರೆ ಸಾಕ್ಷಿಯು ಗಣಪತಿ ದೇವಸ್ಥಾನ ಮತ್ತು ಅದರ ಪಕ್ಕ ಟ್ರಾವೆಲ್ಸ ಇದೆ ಎಂದು ನುಡಿಯುತ್ತಾರೆ. ಆರ್.ಗೇಟ್

ಸರ್ಕಲ್ ಬಳಿ ಯಾವುದೇ ಬಿಲ್ಡಿಂಗ್ ಇಲ್ಲದೆ ಇದ್ದರೂ ಈ ಪ್ರಕರಣಕ್ಕಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನಗೆ 3 ಎಕರೆ ನೀರಾವರಿ ಜಮೀನು ಮತ್ತು 75 ತೆಂಗಿನ ಮರಗಳು ಇದ್ದು , ಮಂಡ್ಯದಲ್ಲಿ 3 ಅಂಗಡಿ ಮಳಿಗೆ ಬಾಡಿಗೆ ಬರುತ್ತದೆ. ಸದರಿ ಜಮೀನು ಅರಕೆರೆ ಹೋಬಳಿಯ ಬನ್ನಹಳ್ಳಿಯ ಗ್ರಾಮದಲ್ಲಿದೆ. ಸದರಿ ಆಸ್ತಿಯ ದಾಖಲೆ ನನ್ನ ಹೆಸರಿನಲ್ಲೇ ಇದೆ. ನಾನು ಕ್ಲಾಸ್ 3 ಗುತ್ತಿಗೆ ಕೆಲಸ ಮಾಡುತ್ತೇನೆ ಪರವಾನಗೆ ಇಲ್ಲ. ನಾನು ಗುತ್ತಿಗೆ ಕೆಲಸ ಮಾಡುವ ಬಗ್ಗೆ ದಾಖಲೆ ಇಲ್ಲ ನಂಬುಗೆ ಮೇಲೆ ಗುತ್ತಿಗೆ ಕೆಲಸ ಕೊಡುತ್ತಾರೆ. ನಾನು ಆದಾಯ ತೆರಿಗೆ ಪಾವತಿ ದಾರನಲ್ಲ. ನನಗೆ ಮೇಲೆ ಹೇಳಿದಂತೆ ಆಸ್ತಿಗಳು ಇದೆ ಸರ್ಕಾರಕ್ಕೆ ಘೋಷಣೆ ಮಾಡಿಕೊಂಡಿಲ್ಲ.

ದೂರು ಸಲ್ಲಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿದ್ದೇನೆ ಅದರಲ್ಲಿನ ಎಲ್ಲಾ ಅಂಶಗಳು ಸರಿ ಇವೆ. ದಿಃ02.11.2014 ರಂದು ನನ್ನ ಮಂಡ್ಯದ ಮನೆಯಲ್ಲಿ ಆರೋಪಿಗೆ ಹಣ ನೀಡಿದ್ದೇನೆ. ಆ ಸಮಯದಲ್ಲಿ ಆರೋಪಿಯೊಂದಿಗೆ ಯಾರು ಬಂದಿರಲಿಲ್ಲ. ಆ ಸಮಯದಲ್ಲಿ ನನ್ನ ಮನೆಯಲ್ಲಿ ಯಾರು ಇರಲಿಲ್ಲ. ಆಗ ಬೆಳಗ್ಗೆ 10-30 ಗಂಟೆ ಆಗಿರಬಹುದು. ಹಣ ಬೇಕು ಎಂದು ಆರೋಪಿ ಸುಮಾರು 15 ದಿನ ಗಳ ಹಿಂದೆ ನನ್ನ ಮನೆಗೆ ಬಂದು ಕೇಳಿದ್ದರು. ಆ ಸಮಯದಲ್ಲಿ ನನ್ನ ಮನೆಯಲ್ಲಿ ಯಾರು ಇರಲಿಲ್ಲ. ಆತನ ಹಣ ತಕ್ಷಣವೇ ಕೊಡುತ್ತೇನೆ ಎಂದು ಒಪ್ಪಿಕೊಳ್ಳಲಿಲ್ಲ 15 ದಿನ ನಂತರ ಕೊಡುತ್ತೇನೆ ಎಂದು ಹೇಳಿದೆನು. ಮೇಲಿನಂತೆ ಆರೋಪಿ ಹಣ ಕೇಳಿದ ಬಗ್ಗೆ ಪಿರ್ಯಾದಿ ಯಲ್ಲಿ ಹೇಳಿಲ್ಲ.

ಆರೋಪಿ ಹಣ ಕೇಳಿದಾಗ ಬಡ್ಡಿಯ ಬಗ್ಗೆ ಮಾತು ಕತೆ ನಡೆದಿಲ್ಲ. ನಂಬಿಕೆಯ ಮೇಲೆ ನೀಡಿರುತ್ತೇನೆ. ಸದರಿ ಹಣವನ್ನು 1 ತಿಂಗಳ ನಂತರ ವಾಪಸ್ಸು ಕೊಡುತ್ತೇನೆ ಆರೋಪಿ ಹೇಳಿದ ಅಂಶಗಳನ್ನು ಪಿರ್ಯಾದಿಯಲ್ಲಿ ಹೇಳಿಲ್ಲ. ಈ ವ್ಯವಹಾರದ ಹಿಂದೆ ಆರೋಪಿಗೆ ಹಣ ಕೊಡುವುದಾಗಲೀ ಪಡೆಯುವುದಾಗಲೀ ಹಣದ ವ್ಯವಹಾರ ನಡೆದಿಲ್ಲ. ಈ ಹಿಂದೆ ಆರೋಪಿಯೊಂದಿಗೆ ಹಣದ ವ್ಯವಹಾರ ನಡೆಯದೆ ಇದ್ದರೂ ಏಕಾ ಏಕಿ ರೂ. 2.95 ಸಾವಿರಗಳನ್ನು ನೀಡಿರುತ್ತೀರಾ ಎಂದರೆ ನಂಬಿಕೆ ಮೇಲೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಹಣಕಾಸಿ ವ್ಯವಹಾರದಲ್ಲಿ ಇದೇ ಮೊದಲ ಪರಿಚಯವಾಗಿರುತ್ತದೆ.

ನನ್ನ ಹೆಂಡತಿ ಮಂಡ್ಯದ ಆನೆಕೆರೆ ಬೀದಿಯ ವಾಸಿ ಎಂದರೆ ಹೌದು. ನಾನು ಸಹಾ ಅಲ್ಲೆ ವಾಸವಾಗಿದ್ದೇನೆ. ನನ್ನ ಹೆಂಡತಿ ಇಬ್ಬರು ಸಹೋದರರು. ಅವರಲ್ಲಿ ಶರತ್ ಎಂಬುವವರು ಒಬ್ಬರು ಎಂದರೆ ಗೊತ್ತಿಲ್ಲ. ಸದರಿ ಶರತ್ ವಿಶೇಷ ತಳಿಯ ನಾಯಿಗಳನ್ನು ಸಾಕಿ ಮಾರಾಟ ಮಾಡುತ್ತಾರೆ ಎಂದರೆ ಆತ ಯಾರು ಎಂದು ಗೊತ್ತಿಲ್ಲ. ಆತನ ನನ್ನ ಸ್ವಂತ ಬಾಮೈದಾ ಆಗಿದ್ದರೂ ಸಹಾ ಗೊತ್ತಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಸದರಿ ಶರತ್ ಅವರಿಂದ 20 ಸಾವಿರ ರೂಗಳನ್ನು ಸಾಲವಾಗಿ ಪಡೆದಿದ್ದು ಅದರ ಭದ್ರತೆಗಾಗಿ ನೀಡಿದ ಚೆಕ್ ಅನ್ನು ನಾನು ದುರುಪಯೋಗ ಪಡಿಸಿಕೊಂಡು ರೂ 2.95 ಸಾವಿರಗಳಿಗೆ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ನಿಪಿ1 ರ ಬರವಣಿಗೆ ಮತ್ತು ಅದರಲ್ಲಿನ ಸಹಿ ಬೇರೆ ಬೇರೆ ಶಾಹಿಗಳಲ್ಲಿ ಇದೆ ಎಂದರೆ ಸರಿಯಲ್ಲ. ನಿಪಿ1 ರ ಬರವಣಿಗೆ ಮತ್ತು ಸಹಿ ಬೇರೆ ಬೇರೆ

ವ್ಯಕ್ತಿಗಳಾಗಿರುತ್ತದೆ ಎಂದರೆ ಸರಿಯಲ್ಲ . ಆರೋಪಿ ನನ್ನ ಮುಂದೆ ಬರೆದಿರುತ್ತಾರೆ. ಸದರಿ ಅಂಶಗಳ ರುಜುವಾತುವಿಗಾಗಿ ಬರವಣಿಗೆ ತಜ್ಞರ ತಪಾಸಣೆಗೆ ಕಳುಹಿಸಲು ನನ್ನ ತಕಾರಾರು ಇಲ್ಲ.

ನಾನು ದಿಃ 22.01.2015 ರಂದು ನಾನು ಆರೋಪಿಗೆ ನೋಟಿಸ್ ನೀಡಿದ್ದೇನೆ. ಸದರಿ ನೋಟಿಸ್ ಯಾವಾಗ ಜಾರಿಯಾಗಿರುತ್ತದೆ ಎಂದು ಪಿರ್ಯಾದಿಯಲ್ಲಿ ಹೇಳಿರುತ್ತೇನೆ ಎಂದರೆ ನೆನಪಿಲ್ಲ. ಸದರಿ ನೋಟಿಸ್ ಆರೋಪಿಗೆ ಜಾರಿಯಾಗಿರುತ್ತದೆ. ನಿಪಿ1 ಎ ಸಹಿ ಮತ್ತು ನಿಪಿ5 ರಲ್ಲಿನ ಸಹಿಗಳಲ್ಲಿ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ . ಎರಡು ಒಂದೇ ಆಗಿರುತ್ತದೆ. ಸದರಿ ಸಹಿಗಳು ಬೇರೆ ಬೇರೆ ಆಗಿದ್ದರೂ ಸಹಾ ಒಂದೇ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನೀಡಿರುತ್ತೇನೆ ಎಂದು ಹೇಳಿರುವ ನೋಟಿಸ್ ಆರೋಪಿಗೆ ಜಾರಿಯಾಗದೆ ಇದ್ದರೂ ಸಹಾ ಅದನ್ನು ಸೃಷ್ಠಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸದರಿ ಸ್ವಿಕೃತಿಯನ್ನು ಸೃಷ್ಠಿಸಿರುವ ಕಾರಣದಿಂದ ನೋಟಿಸ್ ಯಾವಾಗ ಜಾರಿಯಾಗಿದೆ ಎಂದು ಪಿರ್ಯಾದಿಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ನಿಪಿ5 ನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ನಮೂದಾಗಿರುವ ಅಂಚೆ ಇಲಾಖೆಯವರ ಮೊಹರು ದಿಃ 22.02.2015 ಎಂದು ಮುದ್ರಿತವಾಗಿದೆ ಎಂದರೆ ಹೌದು. ಯಾವುದೇ ಸ್ವೀಕೃತಿ ನಕಲು ಜಾರಿಯಾದ ಮೇಲೆ 15 ದಿನಗಳ ಕಾಲಾವಕಾಶ ಸದರಿ ನೋಟಿಸನ ವ್ಯಕ್ತಿಗೆ ನೀಡಿದ್ದೇನೆ ಎಂದರೆ ಹೌದು. ಪಿರ್ಯಾದಿಯನ್ನು ನಾನು ದಿಃ 06.03.2015 ರಂದು ದಾಖಲಿಸಿದ್ದೇನೆ ಎಂದರೆ ಹೌದು. ನಿಪಿ5 ರ ಸ್ವಿಕೃತಿ ಜಾರಿಯಾದ 15 ದಿನಗಳ ಪೂರ್ವದಲ್ಲಿಯೇ ಈ ಪಿರ್ಯಾದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಪಿ5 ಅನ್ನು ಸೃಷ್ಠಿಸಿರುವ ಕಾರಣ ನಿಗಧಿತ ಕಾಲದ

ಕಾಲಮಿತಿಯ ಪೂರ್ವದಲ್ಲಿ ಪಿರ್ಯಾದಿ ದಾಖಲಿಸಿದ್ದೇನೆ ಎಂದರ ಸುಳ್ಳು .

ನಿಪಿ3 ರ ನೋಟಿಸ್ ಆರೋಪಿಗೆ ಜಾರಿಯಾಗಿರುವುದಿಲ್ಲ ಎಂದರೆ ಸುಳ್ಳು .

ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ

ಪ್ರಧಾನ ಸಿಜೆ, ಶ್ರೀರಂಗಪಟ್ಟಣ